**ಪಾಠ 10** ಸೆಪ್ಟೆಂಬರ್ 1-7

# ಮೂರನೇಯ ಸುವಾರ್ತೆಯ ಪ್ರಯಾಣ



## ಸಬ್ಬತ್ತಿನ ಮಧ್ಯಾಹ್ನ:

**ಈ ವಾರದ ಪಾಠದ ಅಧ್ಯಯನಕ್ಕಾಗಿ:** ಅ.ಪೋ.ಕೃ 18:24-28, ಅ.ಪೋ.ಕೃ 19 ಅ.ಪೋ.ಕೃ 20:7-12, 15:27, 2 ಕೊರಿಂಥ 4:8-14, ಅ.ಪೋ.ಕೃ 21:1-15.

**ಸ್ಮರಣ ವಾಕ್ಯ:** **"ಆದಾಗ್ಯೂ ಇವುಗಳಲ್ಲಿ ಯಾವದೊಂದು ನನ್ನನ್ನು ಕದಲಿಸುವದಿಲ್ಲ; ಇಲ್ಲವೆ ನನ್ನ ಪ್ರಾಣವು ನನಗೆ ಪ್ರಿಯವಾದದ್ದೆಂದು ನಾನು ಎಣಿಸುವದಿಲ್ಲ; ಹೀಗೆ ದೇವರ ಕೃಪೆಯ ಸುವಾರ್ತೆಯನ್ನು ಸಾಕ್ಷಿಕರಿಸುವದಕ್ಕಾಗಿ ನಾನು ಕರ್ತನಾದ ಯೇಸುವಿನಿಂದ ಹೊಂದಿದ ಸೇವೆಯೆಂಬ ಓಟವನ್ನು ಸಂತೋಷದಿಂದ ಕೊನೆಗಾಣಿಸುವ." (ಅ.ಪೋ.ಕೃ 20:24).**

ಪೌಲನ ಮೂರನೇಯ ಸುವಾರ್ತೆಯ ಪ್ರಯಾಣದ ವರದಿಯನ್ನು ಲೂಕನು ಆತುರವಾಗಿ ಆರಂಭಿಸುತ್ತಾನೆ. ವಚನದ ಪ್ರಕಾರ ಪೌಲನ ಸುವಾರ್ತೆಯ ಕೇಂದ್ರ ಸ್ಥಾನವಾದ ಅಂತಿಯೋಕ್ಯದಲ್ಲಿ ಸ್ವಲ್ಪ ಸಮಯವನ್ನು ಕಳೆದ ನಂತರ ಆತನು ಮತ್ತೊಂದು ಪ್ರಯಾಣವನ್ನು ಮುಂದುವರೆಸಿದನು. "ತರುವಾಯ ಅವನು ಅಂತಿಯೋಕ್ಯದಲ್ಲಿ ಕೆಲವು ಕಾಲ ಇದ್ದು ತಿರಿಗಿ ಹೊರಟು ಕ್ರಮವಾಗಿ ಗಲಾತ್ಯ ಸೀಮೆಯಲ್ಲಿಯೂ ಫ್ರುಗ್ಯದಲ್ಲಿಯೂ ಸಂಚಾರ ಮಾಡುತ್ತಾ ಶಿಷ್ಯರೆಲ್ಲರನ್ನು ಬಲಪಡಿಸಿದನು." *(ಅ.ಪೋ.ಕೃ 18:23).* ಈ ಪ್ರಯಾಣದ ಮೊದಲ 1,500 ಮೈಲಿಗಳ ವಿವರಣೆಯನ್ನು ಒಂದು ವಾಕ್ಯದಲ್ಲಿ ವಿವರಿಸಲಾಗಿದೆ.

ಯಾಕೆಂದರೆ ಈ ಪ್ರಯಾಣದ ಮುಖ್ಯವಾದ ಉದ್ದೇಶ ಎಫೆಸ, ಈ ನಗರದಲ್ಲಿ ಪೌಲನು ಈ ಹಿಂದಿನ ಎಲ್ಲಾ ಪ್ರಯಾಣಗಳಿಗಿಂತ ಹೆಚ್ಚಿನ ಸಮಯವನ್ನು ಕಳೆದನು.ಸುವಾರ್ತೆಯ ದೃಷ್ಟಿಯಿಂದ ನೋಡಿದರೆ ಎಫೆಸದಲ್ಲಿ ಪೌಲನು ನಡೆಸಿದ ಸೇವೆಯು ಬಹಳ ಫಲಪ್ರಧವಾಗಿತ್ತು. ಪೌಲನ ಪ್ರಸಂಗದ ವಿಷಯ ಇಡೀ ಏಷ್ಯಾ ಪ್ರಾಂತ್ಯದಲ್ಲೆಲ್ಲಾ ಹಬ್ಬಿತ್ತು. (ಅ.ಪೋ.ಕೃ 19:10,26). ಬಹುಶಃ ಈ ಸಮಯದಲ್ಲಿಯೇ ಕೊಲೆಸ್ಸಿ ಹಿರಪೋಲಿಸ್ ಮತ್ತು ಲವೋದಕಿಯ ಸಭೆಗಳನ್ನು ಸ್ಥಾಪಿಸಿರಬಹುದು. ಇವೆಲ್ಲವನ್ನೂ ಎಫ್ರಾಸನ ಸಹಕಾರದಿಂದ ಸ್ಥಾಪಿಸರಬಹುದು. *(ಕೊಲೋಸ್ಸೆ 4:12,13).* ಇವನು ಪೌಲನ ಜೊತೆ ಕೆಲಸಗಾರನು *(ಕೊಲೋಸ್ಸೆ 1:7, ಫಿಲೋಮಿನ 23).*

ಈ ಪ್ರಯಾಣದ ಒಂದು ಅದ್ಭುತವಾದ ವಿಷಯವೆಂದರೆ, ಈ ಪ್ರಯಾಣದಲ್ಲಿ ಪೌಲನು ಸ್ವತಂತ್ರನಾಗಿದ್ದನು ಲೂಕನು ದಾಖಲೆ ಮಾಡುವ ಮತ್ತೊಂದು ಪ್ರಯಾಣದಲ್ಲಿ ಆತನು ಸೆರೆವನಾಗಿದ್ದನು.

**ಭಾನುವಾರ** ಸೆಪ್ಟೆಂಬರ್ 2

## ಎಫೆಸ ಭಾಗ 1

ಅ.ಪೋ.ಕೃ 18:24-28 ರಲ್ಲಿ ಹೇಳುವ ಹಾಗೆ ಪೌಲನು ಎಫೆಸದ ದಾರಿಯಲ್ಲಿರುವಾಗಲೇ ಯೆಹೂದ್ಯ ವಿಶ್ವಾಸಿಯಾದ ಅಪೋಲ್ಲೋ ಎಂಬುವವನು ಆ ನಗರಕ್ಕೆ ಬಂದಿದ್ದನು. ಅವನು ಚೆನ್ನಾಗಿ ಮಾತನಾಡುವವನು ಮತ್ತು ಸತ್ಯವೇದದಲ್ಲಿ ಪಾಂಡಿತ್ಯವನ್ನು ಹೊಂದಿದ್ದನು. ಅಪೋಲ್ಲೋ ಯೇಸುವಿನ ಹಿಂಬಾಲಕನು ಎಂದು ಲೂಕನು ಬರೆಯುವ ಮಾತುಗಳಲ್ಲಿ "ಇವನು ಕರ್ತನ ಮಾರ್ಗದ ವಿಷಯದಲ್ಲಿ ಉಪದೇಶ ಹೊಂದಿದವನಾಗಿದ್ದನು; ಆತ್ಮದಲ್ಲಿ ಆಸಕ್ತನಾಗಿದ್ದ ಇವನು ಯೋಹಾನನು ಮಾಡಿಸಿದ ಬಾಪ್ತಿಸ್ಮವನ್ನು ಮಾತ್ರ ಬಲ್ಲವನಾಗಿದ್ದನು. ಆದಾಗ್ಯೂ ಕರ್ತನ ವಿಷಯಗಳನ್ನು ಸೂಕ್ಷ್ಮವಾಗಿ ಹೇಳಿ ಉಪದೇಶಿಸುತ್ತಿದ್ದನು *(ಅ.ಪೋ.ಕೃ 18:25)* ರಲ್ಲಿ ಸ್ಪಷ್ಟವಾಗಿ ತಿಳಿಯುತ್ತದೆ. ಆದರೋ ಅವನಿಗೆ ಯೋಹಾನನ ದೀಕ್ಷಾಸ್ನಾನದ ಕುರಿತಾಗಿ ಮಾತ್ರ ಗೊತ್ತಿತ್ತು. ಯೋಹಾನನಿಂದ ದೀಕ್ಷಾಸ್ನಾನ ಹೊಂದಿದ್ದ ಅವನು ಯೇಸುವಿನ ಈ ಲೋಕದ ಜೀವನದ ಕುರಿತಾಗಿ ಚೆನ್ನಾಗಿ ಬಲ್ಲವನಾಗಿದ್ದನು, ಆದರೆ ಅವನು ಯೇಸುವಿನ ಶಿಲುಬೆ ವಾರದ ಮುನ್ನ ತನ್ನ ಸ್ವಂತ ಊರಾದ ಅಲೆಗ್ಸಾಂಡ್ರಿಯಾಕ್ಕೆ ಹಿಂತಿರುಗಿ ಹೋಗಿರಬಹುದು.

ಇದರಿಂದಾಗಿಯೇ ಅಕ್ವಿಲ್ಲ ಮತ್ತು ಪ್ರಿಸ್ಕಿಲ್ಲರು ಅವನಿಗೆ ಹೆಚ್ಚಿನ ತರಬೇತಿಯನ್ನು ನೀಡಿದರು. ವಾಕ್ಯದ ಆಧಾರದ ಮೇಲೆ ಯೇಸುವೆ ಮೆಸ್ಸಿಯನು ಎಂದು ರುಜುಗೊಳಿಸುವುದು ಹೇಗೆ ಎಂದು ತಿಳಿಸಿದರು *(ಅ.ಪೋ.ಕೃ 18:28).* ಯೇಸುವಿನ ಸುವಾರ್ತೆ ಸೇವೆಯ ಸಮಯದಿಂದ ಈಗಿನ ಕ್ರೈಸ್ತ ಸೇವೆಯ ಸಮಯಕ್ಕೆ ಹೊಂದಿಕೊಳ್ಳಬೇಕಾಗಿತ್ತು. ಆದರೂ ಅಕ್ವಿಲ್ಲ ಮತ್ತು ಪ್ರಿಸ್ಕಿಲ್ಲ ಅಪೋಲ್ಲೋವಿಗೆ ಹೆಚ್ಚಿನ ಸಹಾಯವನ್ನು ಮಾಡಿದರು. ಅಕಿಯಾ ಪ್ರಾಂತ್ಯದ ಕ್ರೈಸ್ತರಿಗೆ ಸುವಾರ್ತೆಯನ್ನು ಸಾರಲು ಅವನಿಗೆ ಬೇಕಾದ ಪ್ರಮಾಣ ಪತ್ರವನ್ನು ನೀಡಿ ಅವನನ್ನು ಅಲ್ಲಿಗೆ ಕಳುಹಿಸಿದರು (*ಅ.ಪೋ.ಕೃ 18:27*), ಇದು ಅವನು ಕೊರಿಂಥದಲ್ಲಿ ಉತ್ತಮವಾದ ಸೇವೆಯನ್ನು ಸಲ್ಲಿಸಲು ಸಹಾಯವಾಯಿತು *(1 ಕೊರಿಂಥ 3:4-6, 4:6, 16:12).*

**ಅ.ಪೋ.ಕೃ 19"1-7 ನ್ನು ಓದಿರಿ. ಪೌಲನು ಎಫೆಸಕ್ಕೆ ಬಂದಾಗ ಏನಾಯಿತು?**

________________________________________________________________

________________________________________________________________

ಪೌಲನು ಆ ನಗರಕ್ಕೆ ಬಂದು ಅಲ್ಲಿರುವ 12 ಮಂದಿಯನ್ನು ಸಂಧಿಸುವ ಸನ್ನಿವೇಶವು ಅಪೋಲ್ಲೋವಿನ ಕಥೆಯ ಜೊತೆಗೆ ಸೇರುತ್ತದೆ.ಯಾಕೆಂದರೆ ಅವರ ಪರಿಸ್ಥಿತಿಯು ಇದಕ್ಕೆ ಹೊಂದಿಕೊಂಡಿತ್ತು ಅವರು "ಶಿಷ್ಯರು" (*ಅ.ಪೋ.ಕೃ 19:1*) ಎಂದು ಕರೆಸಿಕೊಳ್ಳುತ್ತಿದ್ದರು. ಮತ್ತು ಪೌಲನು ಅವರನ್ನು ಕೇಳಿದ ಪ್ರಶ್ನೆ *(ಅ.ಪೋ.ಕೃ 19:2)* ಆದರೆ ಅವರು ಈಗಾಗಲೇ ಯೇಸುವಿನ ಹಿಂಬಾಲಕರಾಗಿದ್ದರು. ಇದೆ ಸಮಯದಲ್ಲಿ ಅವರು ಪೌಲನಿಗೆ ನೀಡಿದ

ಉತ್ತರವನ್ನು ನೋಡಿದರೆ ಅವರ ಸ್ಥಿತಿಯು ಅಪೋಲ್ಲೋವಿನ ಹಾಗೆ ಇತ್ತು. ಅವರು ಯೋಹಾನನ ಶಿಷ್ಯರಾಗಿದ್ದರು ನಂತರ ಯೇಸುವಿನ ಶಿಷ್ಯರಾದರು ಆದರೆ ಅವರಿಗೆ ಪವಿತ್ರಾತ್ಮನ ಅನುಭವವಾಗಿರಲಿಲ್ಲ. ಅವರಿಗೆ ದೇವರಾತ್ಮದ ಆಳವಾದ ಅನುಭವ ಬೇಕಾಗಿತ್ತು.

"ಎಫೆಸಕ್ಕೆ ಬಂದ ನಂತರ ಪೌಲನು 12 ಮಂದಿಯನ್ನು ಸಂಧಿಸಿದನು, ಇವರು ಯೋಹಾನನ ಶಿಷ್ಯರಾಗಿದ್ದರು. ಅಪೋಲ್ಲೋವಿನ ಹಾಗೆ ಅವರು ಯೇಸುವಿನ ಸುವಾರ್ತೆಯ ಜ್ಞಾನವನ್ನು ಪಡೆದುಕೊಂಡಿದ್ದರು. ಆದರೆ ಅವರು ಪ್ರಾಮಾಣಿಕವಾಗಿ ತಮಗೆ ತಿಳಿದ ಸತ್ಯವನ್ನು ಸುವಾರ್ತೆಯ ರೂಪದಲ್ಲಿ ಸಾರಲು ಪ್ರಯತ್ನ ಪಡುತ್ತಿದ್ದರು." **ಎಲೆನ್ ಜಿ ವೈಟ್ *ದಿ ಅಕ್ಟ್ಸ್ ಅಪೋಸ್ಟ್ಲ ಸ್,* ಪುಟ 282.**

ಅವರ ಮರು ದೀಕ್ಷಾಸ್ನಾನವನ್ನು ನಾವು ವಿಶೇಷವಾದ ವಿಧಾನವಾಗಿ ನೋಡಬೇಕಾಗಿದೆ. ಅವರು ಬೇರೆ ಕ್ರೈಸ್ತ ಸಭೆಯಿಂದ ಬಂದವರಲ್ಲ, ಮತ್ತು ಅವರು ಮಾನಸಾಂತರವನ್ನು ಅನುಭವಿಸಿದವರಲ್ಲ. ಅವರು ಸುವಾರ್ತೆಯಲ್ಲಿ ಮಾತ್ರ ಗುರುತಿಸಿಕೊಂಡವರು ಅವರು ಆತ್ಮವನ್ನು ಹೊಂದಿಕೊಂಡು ಭಾಷೆಗಳಲ್ಲಿ ಮಾತನಾಡುತ್ತಿದ್ದನ್ನು ಗಮನಿಸಿದರೆ ಅವರು ಕ್ರೈಸ್ತ ಸುವಾರ್ತಿಕರಾಗಿದ್ದರು. ಅಪೋಲ್ಲೋವಿನ ಹಾಗೆ ಅವರು ಎಲ್ಲಿಗೆ ಹೋದರೂ ಕೂಡ ಯೇಸುವಿನ ಕುರಿತಾಗಿ ಸಾಕ್ಷಿಯನ್ನು ನುಡಿದರು.

**ಸೋಮವಾರ** ಸೆಪ್ಟೆಂಬರ್ 3

## ಎಫೆಸ ಭಾಗ 2

ಎಫೆಸದಲ್ಲಿ ತನ್ನ ಅಭ್ಯಾಸದ ಪ್ರಕಾರ ಮೊದಲು ಸಭಾಮಂದಿರದಲ್ಲಿ ವಾಕ್ಯವನ್ನು ಹೇಳುವುದನ್ನು ಮುಂದುವರೆಸಿದನು. ಪ್ರತಿರೋಧವು ಉಂಟಾದಾಗ ಅವನು ಹೊಸ ವಿಶ್ವಾಸಿಗಳ ಸಂಗಡ ಹೋಗಿ ತುರನ್ನನ ಶಾಲೆಗೆ ಹೋಗಿ ಅಲ್ಲಿ ದೇವರ ವಾಕ್ಯವನ್ನು ಸಾರಿದನು. ಅಲ್ಲಿ ಪೌಲನು ಎರಡು ವರ್ಷಗಳ ತನಕ ಸೇವೆಯನ್ನು ಸಲ್ಲಿಸಿದನು *(ಅ.ಪೋ.ಕೃ 19:8-10)*. ಲೂಕನು ಪೌಲನ ಎಫೆಸದ ಪ್ರಯಾಣದ ಕುರಿತಾಗಿ ಹೇಳುವಾಗ ಆ ಪ್ರಾಂತ್ಯವೆಲ್ಲಾ ಸುವಾರ್ತೆಯಿಂದ ತುಂಬಿತ್ತು ಎಂದು ಹೇಳುತ್ತಾನೆ *(ಅ.ಪೋ.ಕೃ 19:10,26).*

ಅ.ಪೋ.ಕೃ 19:11-20 ರಲ್ಲಿ ನೋಡುವಾಗ ಲೂಕನು ಕೆಲವು ಅದ್ಭುತಗಳು ಯಾವ ರೀತಿಯಲ್ಲಿ ವಿಗ್ರಹಾರಾಧನೆ ಮತ್ತು ಮಾಟ ಮಂತ್ರಗಳು ಸಾಮಾನ್ಯವಾಗಿದ್ದ ಆ ನಗರದಲ್ಲಿ ಸುವಾರ್ತೆಯ ಮೂಲಕ ದೇವರ ಶಕ್ತಿಯು ಹೇಗೆ ಪ್ರಸಿದ್ಧಿಗೆ ಬಂದಿತು ಎಂದು ಹೇಳುತ್ತಾನೆ. ದೇವರು ಪೌಲನ ಮೂಲಕ ಅದ್ಭುತಗಳನ್ನು ನಡೆಸಿದನು ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಆದರೂ ಕೂಡ ಪೌಲನ ಕರವಸ್ತ್ರಗಳು ಮತ್ತು ಬಟ್ಟೆಗಳು ಕೂಡ ಸ್ವಸ್ಥತೆಯನ್ನು ತಂದವು (*ಅ.,ಪೋ.ಕೃ 19:12)* ಎಂಬುದು ಸ್ವಲ್ಪ ಅಚ್ಚರಿಯನ್ನು ತರಬಹುದು. ಇದು ಯೇಸುವು ರಕ್ತಸ್ರಾವ ಸ್ತ್ರೀಯನ್ನು ಗುಣಪಡಿಸಿದ ಅದ್ಭುತವನ್ನು ಜ್ಞಾಪಕಪಡಿಸಿತ್ತದೆ *(ಲೂಕ 8:44).* ಎಫೆಸದಲ್ಲಿರುವ ಮಾಟಮಂತ್ರಗಳು ದೇವರು ಹೆಚ್ಚಿನ ಅದ್ಭುತಗಳನ್ನು ನಡೆಸುವಂತೆ ಮಾಡಿರಬಹುದು. ಲೂಕನು ಹೇಳುವ ಹಾಗೆ

*(ಅ.ಪೋ.ಕೃ 19:11),* ಇದು ಜನರ ಅವಶ್ಯಕತೆಗೆ ತಕ್ಕ ಹಾಗೆ ದೇವರು ಅದ್ಭುತಗಳನ್ನು ಮಾಡುವನು ಎಂದು ತೋರಿಸುತ್ತದೆ.

ಎಫೆಸದಲ್ಲಿ ತನ್ನ ಸುವಾರ್ತೆಯ ಫಲದಿಂದ ತೃಪ್ತಿಯಾದ ಪೌಲನು ಯೆರುಷಲೇಮಿಗೆ ಹೋಗಲು ತೀರ್ಮಾನಿಸಿದನು *(ಅ.ಪೋ.ಕೃ 19:21).* ಲೂಕನು ಈ ಪ್ರಯಾಣಕ್ಕೆ ಕಾರಣವನ್ನು ನೀಡುವುದಿಲ್ಲ, ಆದರೆ ಯೆರುಷಲೇಮಿನಲ್ಲಿರುವ ಬಡವರಿಗಾಗಿ ತಾನು ಸಂಗ್ರಹಿಸಿದ್ದ ಹಣವನ್ನು ಅವರಿಗೆ ತಲುಪಿಸುವುದು ಆತನ ಉದ್ದೇಶವಾಗಿತ್ತು *(ರೋಮ 15:25-27, 1 ಕೊರಿಂಥ 16:1-3).* ಕ್ಲಾಡಿಯಸ್ ನ ಕಾಲದಲ್ಲಿ ಭೀಕರ ಬರಗಾಲ ಉಂಟಾಗಿದ್ದರಿಂದ ಯೆಹೂದ್ಯರು ಸಹಾಯಕ್ಕಾಗಿ ಬೇಡಿದ್ದನ್ನು ಪೌಲನು ಗಮನಿಸಿದ್ದನು *(ಗಲಾತಿ 2:10)* ತನ್ನ ಅಪೋಸ್ತಲತನದಲ್ಲಿ ಅವರಿಗಿರುವ ನಂಬಿಕೆಯನ್ನು ದೃಢಪಡಿಸಲು ಮತ್ತು ಪ್ರಪಂಚದ ಐಕ್ಯತೆಯನ್ನು ಬಲಪಡಿಸುವುದು ಇದರ ಉದ್ದೇಶವಾಗಿತ್ತು. ಇದರಿಂದ ಅವನು ಅಪಾಯಕ್ಕೆ ಗುರಿಯಾಗುತ್ತಾನೆ ಎಂಬ ಅಂಶವು ಅವನಿಗೆ ಗೊತ್ತಿದ್ದರೂ ಕೂಡ ಈ ಕಾರ್ಯವನ್ನು ಮಾಡಲು ಮುಂದೆ ಬಂದನು. *(ಅ.ಪೋ.ಕೃ 20:22, 23; ರೋಮ 15:31).*

**ಅ.ಪೋ.ಕೃ 19:23-41 ನ್ನು ಓದಿರಿ. ಎಫೆಸದಲ್ಲಿ ಪೌಲನ ಸೇವೆಯ ಕೊನೆಯ ಭಾಗದಲ್ಲಿ ಉಂಟಾದ ಪ್ರತಿರೋಧಕ್ಕೆ ನಿಜವಾದ ಕಾರಣವೇನು?**

______________________________________________________________________

______________________________________________________________________

ಈ ಪ್ರತಿರೋಧವು ವಿಗ್ರಹರಾಧನೆಗೆ ಸಂಬಂಧಿಸಿದ್ದಾಗಿತ್ತು. ಈ ವಿಷಯವು ಪೌಲನ ಸೇವೆಯನ್ನು ಬಲವಾಗಿ ಭಾದಿಸಿತು. ದೇಮೇತ್ರಿಯನ ಉದ್ದೇಶವು ಕೇವಲ ಹಣಕಾಸಿನ ಲಾಭವಾಗಿತ್ತು. ಆದರೆ ಈ ವಿಷಯವನ್ನು ಧಾರ್ಮಿಕ ವಿಷಯವಾಗಿ ಬದಲಾಯಿಸುವುದರಲ್ಲಿ ಅವನು ಯಶಸ್ವಿಯಾದನು ಯಾಕೆಂದರೆ ಡಯಾನಿ ದೇವರ ದೇವಾಲಯದ ವಿಷಯವು ಅದರಲ್ಲಿ ಸೇರಿಕೊಂಡಿತ್ತು. ಈ ದೇವಿಯ ದೇವಾಲಯವು ಎಫೆಸ ನಗರದಲ್ಲಿದ್ದು ಬಹಳ ಪುರಾತನವಾಗಿತ್ತು.

**ಅ.ಪೋ.ಕೃ 19:27 ನ್ನು ಓದಿರಿ. ಯಾವ ರೀತಿಯಲ್ಲಿ ದೇಮೇತ್ರಿಯನು ವ್ಯವಸ್ಥಿತವಾಗಿ ಧಾರ್ಮಿಕವಿಚಾರವನ್ನು ತೆಗೆದುಕೊಂಡು ಬಂದು ತನಗೆ ಹಣದ ಹೊಳೆಯು ಹರಿಯುವಂತೆ ನೋಡಿಕೊಂಡನು ಎಂಬುದನ್ನು ಗಮನಿಸಿರಿ. ಕ್ರೈಸ್ತರಾಗಿ ನಾವು ನಮ್ಮ ಧಾರ್ಮಿಕ ವಿಚಾರಗಳನ್ನು ಹಣಕಾಸಿನ ವಿಷಯವಾಗಿ ಮತ್ತು ಸಾಂತ್ವನ ಹೊಂದುವ ವಿಷಯವಾಗಿ ಉಪಯೋಗಿಸಬಾರದು ಎಂಬ ಎಚ್ಚರಿಕೆಯನ್ನು ಈ ವಾಕ್ಯಗಳಿಂದ ನಾವು ಕಲಿಯಬಹುದು?**

## ತ್ರೋವ

ಗಲಭೆಯಾದ ನಂತರ *(ಅ.ಪೋ.ಕೃ 19:23-41)*, ಪೌಲನು ಎಫೆಸ ನಗರವನ್ನು ಬಿಟ್ಟುಹೋಗಬೇಕೆಂದು ತೀರ್ಮಾನಿಸಿದನು. ಆದರೆ ಇದರ ಫಲವಾಗಿ ಪೌಲನು ಮೆಕ್ಕದೊನ್ಯ ಮತ್ತು ಆಸಿಯಾ ಪ್ರಾಂತ್ಯದ ಮೂಲಕ ಯೆರುಷಲೇಮಿಗೆ ಹೋಗಲು ತೀರ್ಮಾನಿಸಿದನು (ಅ.ಪೋ.ಕೃ 20:1-3). ಈ ಪ್ರಯಾಣದಲ್ಲಿ ಅನ್ಯ ಸಭೆಗಳ ಕೆಲವು ವಿಶ್ವಾಸಿಗಳು ಅವನ ಜೊತೆಯಲ್ಲಿದ್ದರು *(ಅ.ಪೋ.ಕೃ 20:4)*.

ಪೌಲನು ತ್ರೋವದ ಮಾರ್ಗದಲ್ಲಿ ಉಳಿದಿದ್ದು ಅಲ್ಲಿ "ವಾರದ ಮೊದಲ ದಿನದಲ್ಲಿ ಸಭೆಯಾಗಿ ಕೂಡುವುದರ ಮೂಲಕ ಅಂತ್ಯವಾಯಿತು" *(ಅ.ಪೋ.ಕೃ 20:7)*. ಅವರು "ರೊಟ್ಟಿಯನ್ನು ಮುರಿಯಲು" ಸೇರಿದ್ದರು ಇದು ಬಹುಶಃ ಕರ್ತನ ರಾತ್ರಿ ಭೋಜನದ ಉಲ್ಲೇಖವಾಗಿರಬಹುದು. ಊಟ ಮತ್ತು ಊಟವಿಲ್ಲದೆ ಸೇರುವುದು ಸಾಧ್ಯವಿರಲಿಲ್ಲ ಯಾಕೆಂದರೆ ಯೆರುಷಲೇಮಿನ ಆದಿ ಸಭೆಯಲ್ಲಿ ಪ್ರತಿಯೊಂದು ಕೂಟವು ಕೂಡ ಊಟದ ಜೊತೆಗೆ ಅಂತ್ಯವಾಗುತ್ತಿತ್ತು *(ಅ.ಪೋ.ಕೃ 2:42,46)*. ಯಾಕೆಂದರೆ ಆಲ್ಲಿ ಯಾವುದೇ ದ್ರಾಕ್ಷರಸ ಅಥವಾ ಪ್ರಾರ್ಥನೆಯ ಕುರಿತಾಗಿ ಹೇಳುವುದಿಲ್ಲವಾದ್ದರಿಂದ ಈ ಸಾಧ್ಯತೆಯನ್ನು ತಳ್ಳಿಹಾಕಲು ಸಾಧ್ಯವಿಲ್ಲ. ಈ ಹಂತದಲ್ಲಿ ಈ ಉದಾಹರಣೆಯನ್ನು ಉಪಯೋಗಿಸಿಕೊಂಡು ಪೌಲನ ಕಾಲದಲ್ಲಿ ಅನ್ಯರ ಸಭೆಗಳು ಶನಿವಾರದ ಆರಾಧನೆಯ ದಿನವನ್ನು ವಾರದ ಮೊದಲನೇಯ ದಿನಕ್ಕೆ ಅಂದರೆ ಭಾನುವಾರಕ್ಕೆ ಬದಲಾಯಿಸಿದ್ದರು ಎಂದು ವಾದಿಸುತ್ತಾರೆ.

ಆದರೂ, ಇಂತಹ ವಾದವನ್ನು ಮಾಡುವ ಮೊದಲು, ಯಾವ ದಿನದಲ್ಲಿ ಸಭೆಯಾಗಿ ಅವರು ಸೇರಿದ್ದರೂ ಎಂಬುದನ್ನು ನಾವು ನಿರ್ಧಾರ ಮಾಡಬೇಕು, ಮತ್ತು ಯಾವ ಉದ್ದೇಶಕ್ಕಾಗಿ ಅಲ್ಲಿ ಸೇರಿದ್ದರು ಎಂಬುದನ್ನು ನಾವು ಗಮನಿಸಬೇಕು. ದೀಪಗಳ ಕುರಿತಾಗಿ ಉಲ್ಲೇಖವಾಗಿರುವುದರಿಂದ *(ಅ.ಪೋ.ಕೃ 20:8)*, ಇದರ ಜೊತೆಗೆ ಪೌಲನ ಸಂದೇಶವು ಮಧ್ಯರಾತ್ರಿಯವರೆಗೂ ಮುಂದುವರೆದಿದ್ದರಿಂದ *(ಅ.ಪೋ.ಕೃ 20:7)*, ಮತ್ತು ಬೆಳಗಿನ ಜಾವದ ತನಕ *(ಅ.ಪೋ.ಕೃ 20:11)*, ಯೂತಿಕನ ಗಾಢ ನಿದ್ರೆಯನ್ನು *(ಅ.ಪೋ.ಕೃ 20:9)* ಇವೆಲ್ಲವನ್ನೂ ಪರಿಗಣಿಸಿದಾಗ ಅದು ಒಂದು ರಾತ್ರಿಯ ಕೂಟವಾಗಿತ್ತು.

ಪ್ರಶ್ನೆಯು, ಭಾನುವಾರ ರಾತ್ರಿಯೋ ಅಥವಾ ಭಾನುವಾರದ ನಂತರದ ರಾತ್ರಿಯೋ ಎಂಬುದಾಗಿದೆ. ಇದಕ್ಕೆ ಉತ್ತರವು ಪೌಲನು ಉಪಯೋಗಿಸುವ ಕಾಲಮಾನದ ವಿಧಾನದ ಮೇಲೆ ಅವಲಂಬಿತವಾಗಿದೆ. ಯೆಹೂದ್ಯರ ಕಾಲಮಾನವಾದ ಸಾಯಂಕಾಲದಿಂದ ಸಾಯಂಕಾಲಕ್ಕೆ ಒಂದು ದಿನ ಅಥವಾ ರೋಮನ್ನರ ವಿಧಾನವಾದ ಮಧ್ಯರಾತ್ರಿಯಿಂದ ಮಧ್ಯರಾತ್ರಿಗೆ ಒಂದು ದಿನ, ಈ ಘಟನೆಯು ಒಂದು ವೇಳೆ ಯೆಹೂದ್ಯ ವಿಧಾನವಾದರೆ ಅದು ಶನಿವಾರದ ಮಧ್ಯರಾತ್ರಿ ಅಥವಾ ರೋಮನ್ನರ ವಿಧಾನವಾದರೆ ಅದು ಭಾನುವಾರದ ರಾತ್ರಿ.

ಎರಡೂ ವಿಧಾನದಲ್ಲಿ ಅ.ಪೋ.ಕೃ 20:7-12 ರ ಹಿನ್ನಲೆಯು ಒಂದು ಕೂಟವು ಭಾನುವಾರದ ರಾತ್ರಿಯಾಗಿದ್ದರೂ ಕೂಡ ಅದೊಂದು ಪ್ರತಿವಾರವೂ ನಡೆಯುವ ಕೂಟವಾಗಿರಲಿಲ್ಲ. ಬದಲಿಗೆ ಪೌಲನು ಮಾರನೇಯ ದಿನ ಬೆಳಿಗ್ಗೆ ಪ್ರಯಾಣ ಬೆಳೆಸುತ್ತಿದ್ದರಿಂದ ಅದೊಂದು ವಿಶೇಷವಾದ ಬಿಳ್ಕೊಡುಗೆಯ

ಕಾರ್ಯಕ್ರಮವಾಗಿತ್ತು. ಆದರೆ ಒಂದೊಂದು ಪ್ರತ್ಯೇಕವಾದ ಸನ್ನಿವೇಶವನ್ನು ಇಟ್ಟುಕೊಂಡು ಭಾನುವಾರದ ಆರಾಧನೆಯನ್ನು ಸಮರ್ಥಿಸುವುದು ಸಾಧ್ಯವಿಲ್ಲ, ವಾಕ್ಯವು ಅದನ್ನು ಅನುಮೋದಿಸುವುದಿಲ್ಲ.

**ಏಳನೇಯ ದಿನದ ಸಬ್ಬತ್ತಿನ ಆಚರಣೆಯ ಸಮಂಜಸದ ಕುರಿತಾಗಿ ಆಲೋಚಿಸಿರಿ. ಏಳನೇಯ ದಿನದ ಅಡ್ವೆಂಟಿಸ್ಟ್ ಕ್ರೈಸ್ತರಾಗಿ ಏಳನೇಯ ದಿನದ ಸಬ್ಬತ್ತಿನ ಆಚರಣೆಯನ್ನು ಸತ್ಯವೇದದ ಮೂಲಕ ನಾವು ಹೇಗೆ ದೃಢಪಡಿಸುತ್ತೇವೆ ಮತ್ತು ಈ ಸಂದೇಶವನ್ನು ಮೂರು ದೂತರ ಸಂದೇಶದ ಮೂಲಕ ಇಡೀ ಲೋಕಕ್ಕೆ ನಾವು ಹೇಗೆ ಸಾರಬೇಕಾಗುತ್ತದೆ?'**

**ಬುಧವಾರ** ಸೆಪ್ಟೆಂಬರ್ 5

## ಮಿಲೇತ ದ್ವೀಪದಲ್ಲಿ

ಯೆರುಷಲೇಮಿಗೆ ಹೋಗುವ ಹಾದಿಯಲ್ಲಿ ಪೌಲನು ಮತ್ತೊಂದು ಕಡೆಗೆ ನಿಂತನು. ಈ ಸಮಯದಲ್ಲಿ ಅದು ಮಿಲೇತ ದ್ವೀಪವಾಗಿತ್ತು. ಈ ಸಮಯದಲ್ಲಿ ಎಫೆಸ ಸಭೆಯ ಹಿರಿಯರಿಗೆ ಬೀಳ್ಕೊಡುಗೆಯನ್ನು ಹೇಳುವ ಉದ್ದೇಶದಿಂದ ಅಲ್ಲಿ ಉಳಿದನು.

**ಅ.ಪೋ.ಕೃ 20:15-27 ನ್ನು ಓದಿರಿ. ಪೌಲನು ತನ್ನ ಭಾಷಣದ ಆರಂಭದಲ್ಲಿ ಯಾವ ವಿಷಯವನ್ನು ಪ್ರಸ್ತಾಪಿಸಿದ್ದಾನೆ?**

---

---

ಪೌಲನು ಹೊಸ ಪ್ರಯಾಣದ ಯೋಜನೆಯಲ್ಲಿದ್ದ ಕಾರಣ ಅದರಲ್ಲಿ ರೋಮ್ ಮತ್ತು ಸ್ಪೇನ್ ಸೇರಿತ್ತು *(ಅ.ಪೋ.ಕೃ 15:22-29).* ಪೌಲನು ಏಷ್ಯಾ ಪ್ರಾಂತ್ಯಕ್ಕೆ ಮತ್ತೆ ತಿರುಗಿ ಬರುವುದಿಲ್ಲವೆಂದು ನೆನೆಸಿಕೊಂಡನು, ಆದ್ದರಿಂದ ಅವನು ತನ್ನ ಭಾಷಣವನ್ನು ಎಫೆಸದಲ್ಲಿ ತಾನು ಕಳೆದ ವರ್ಷಗಳ ವರದಿಯನ್ನು ನೀಡುವ ರೀತಿಯಲ್ಲಿ ಆರಂಭಿಸಿದನು. ಆದರೂ ಕೂಡ, ತನ್ನ ಭೂತಕಾಲದ ಅನುಭವಗಳ ಕುರಿತಾಗಿ ಮಾತ್ರವಲ್ಲದೆ,ಅಂದರೆ ತಾನು ಎಫೆಸದಲ್ಲಿ ಜೀವಿಸಿದ ವಿಧಾನವನ್ನು ವಿವರಿಸುವುದು ಮಾತ್ರವಲ್ಲದೆ ಯೆರುಷಲೇಮಿನ ಪ್ರಯಾಣದ ಭವಿಷ್ಯದ ಕುರಿತಾಗಿ ಹೇಳಿದನು ಯಾಕೆಂದರೆ ಯೆರುಷಲೇಮಿನಲ್ಲಿ ಏನು ನಡೆಯುತ್ತದೆ ಎಂಬುದನ್ನು ಅವನು ಮುನ್ಸೂಚನೆಯಾಗಿ ಗ್ರಹಿಸುವವನಾಗಿದ್ದನು.

ಪೌಲನ ಭಯವು ಗುರುತಿಸಲಾಗದ್ದಲ್ಲ, ಯೆರುಷಲೇಮಿನ ಸಭೆಯವರು ಅವನನ್ನು ಸಂಶಯದಿಂದ ನೋಡುತ್ತಿದ್ದರು. ಯಾಕೆಂದರೆ ಅವನು ಈ ಹಿಂದೆ ಕ್ರೈಸ್ತರನ್ನು ಹಿಂಸೆಪಡಿಸಿದರ ಅನುಭವವನ್ನು ಮತ್ತು

ಸುನ್ನತಿಯಿಲ್ಲದವರಿಗೆ ಸುವಾರ್ತೆಯನ್ನು ಸಾರಿದ ಘಟನೆಗಳನ್ನು ಅವರು ಮರೆತಿರಲಿಲ್ಲ *(ಅ.ಪೋ.ಕೃ 21:20-26)*. ಯೆಹೂದ್ಯರಿಗೆ ಅವನು ಒಬ್ಬ ವಿರೋಧಿ ಮತ್ತು ತಮ್ಮ ಧರ್ಮವನ್ನು ಹಾಳುಮಾಡುವವನಾಗಿದ್ದನು *(ಅ.ಪೋ.ಕೃ 23:1,2)*. ಮೊದಲ ಶತಮಾನದ ಮಧ್ಯದಲ್ಲಿ, ಅದರಲ್ಲೂ ವಿಶೇಷವಾಗಿ ರೋಮನ್ನರ ದಬ್ಬಾಳಿಕೆಯ ಹಿನ್ನಲೆಯಲ್ಲಿ ಯೆಹೂದ್ಯರು ಕೂಡ ದಂಗೆ ಏಳುವ ಮನೋಭಾವವನ್ನು ಬೆಳೆಸಿಕೊಂಡಿದ್ದರು. ಈ ಮನೋಭಾವವು ಯೆಹೂದ್ಯರ ಸಮಾಜದ ಎಲ್ಲಾ ವರ್ಗಗಳಿಗೂ ಹಬ್ಬಿತ್ತು. ಇದರಲ್ಲಿ ಸಭೆಯೂ ಕೂಡ ಸೇರಿಕೊಂಡಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಈ ಹಿನ್ನಲೆಯಲ್ಲಿ, ಅನ್ಯರ ಮದ್ಯದಲ್ಲಿ ಪೌಲನು ಮಾಡಿದ ಸೇವೆಯು ಅವನನ್ನು ಶತ್ರುವಿನ ಹಾಗೆ ನೋಡುವಂತೆ ಮಾಡಿತ್ತು.

ಪೌಲನಿಗೂ ಕೂಡ ಹೆಚ್ಚಿನ ಕಾಳಜಿಯಿತ್ತು. ಅ.ಪೋಕೃ 20:28-31 ರಲ್ಲಿ ಪೌಲನು ಎಫೆಸದಲ್ಲಿರುವ ಸಭಿಕರು ತಮ್ಮ ಮದ್ಯದಲ್ಲಿರುವ ಸುಳ್ಳುಬೋಧನೆಯನ್ನು ಹೇಗೆ ಎದುರಿಸುವರು ಎಂದು ಆಲೋಚಿಸಿದನು. ಅವರನ್ನು ಪೌಲನು ಹೊಂಚುಹಾಕುವ ತೋಳಗಳು ಕುರಿಗಳನ್ನು ತಿಂದುಹಾಕುವ ವಿಧಾನಕ್ಕೆ ಹೋಲಿಸುತ್ತಾನೆ. ಆದ್ದರಿಂದ ಸಭೆಯಲ್ಲಿಯೂ ಕೂಡ ಅದರಲ್ಲಿಯೂ ಆದಿ ಸಭೆಯ ಆರಂಭದ ದಿನಗಳಲ್ಲಿ ಸುಳ್ಳುಬೋಧಕರ ಹಾವಳಿ ವಾಸ್ತವವಾಗಿತ್ತು. ಸೋಲೋಮೊನನು ಮತ್ತೊಂದು ಸ್ಥಳದಲ್ಲಿ ಮತ್ತೊಂದು ಹಿನ್ನಲೆಯಲ್ಲಿ ಹೇಳುವ ಹಾಗೆ "ಆಕಾಶದ ಕೆಳಗೆ ಯಾವುದು ಹೊಸದಲ್ಲ" *(ಪ್ರಸಂಗಿ 1:9)*. ಕ್ರೈಸ್ತ ಸಭೆಯ ಚರಿತ್ರೆಯು ನಮಗೆ ಹೇಳುವ ಹಾಗೆ ಸುಳ್ಳುಬೋಧನೆಯು ಸಭೆಗೆ ಉಂಟು ಮಾಡಿರುವ ಹಾನಿಯ ಕುರಿತಾಗಿ ನಾವು ಕಲಿತಿದ್ದೇವೆ. ಈ ಸಮಸ್ಯೆಯು ಅಂತ್ಯದವರೆಗೂ ಇರುತ್ತದೆ *(2 ತಿಮೋಥಿ 4:3)*.

ಪೌಲನು ಅನೇಕ ವಿಚಾರಗಳನ್ನು ತನ್ನ ಮನಸ್ಸಿನಲ್ಲಿಟ್ಟುಕೊಂಡಿದ್ದನು ಎನ್ನುವುದರಲ್ಲಿ ಯಾವುದೇ ಸಂದೇಹವಿರಲಿಲ್ಲ. ಹೆಚ್ಚು ಕಾಳಜಿಯಿತ್ತು ಮತ್ತು ಅವನ ಬದ್ದತೆ ಮತ್ತು ವಿಶ್ವಾಸದಲ್ಲಿ ಯಾವುದೇ ವಿಧವಾದ ಚಂಚಲತೆಯಿರಲಿಲ್ಲ.

**2 ಕೊರಿಂಥ 4:8-14 ನ್ನು ಓದಿರಿ. ಪೌಲನು ಇಲ್ಲಿ ಹೇಳಿರುವ ವಿಚಾರವೇನು ಮತ್ತು ನಾವು ಅದನ್ನು ಹೇಗೆ ಅವಳವಡಿಕೊಳ್ಳಬಹುದು. ಅದರಲ್ಲೂ ವಿಶೇಷವಾಗಿ ಶೋಧನೆಗಳು ಬಂದಾಗ? ಪೌಲನು ತನ್ನ ಅಂತಿಮ ನಿರೀಕ್ಷೆಯನ್ನು ಎಲ್ಲಿ ಇಟ್ಟುಕೊಂಡಿದ್ದಾನೆ?**

**ಗುರುವಾರ** ಸೆಪ್ಟೆಂಬರ್ 6

## ತೂರ್ ಮತ್ತು ಕೈಸರೈ

ಮಿಲೇತಿಯ ನಂತರ ಪೌಲನ ಪ್ರಯಾಣದ ವಿವರಣೆಯನ್ನು ಲೂಕನು ವಿಸ್ತ್ರುತವಾಗಿ ತಿಳಿಸುತ್ತಾನೆ. ಇನ್ನೂ ಯೆರುಷಲೇಮಿನ ಮಾರ್ಗವಾಗಿ ಹೋಗುತ್ತಾ ಪೌಲನು ತ್ರೋವದಲ್ಲಿ ಒಂದು ವಾರ ಕಳೆದನು, ಫೋಯಿನಿಕದ ತೀರದಲ್ಲಿ ಹಡಗು ಕೆಲವು ಸರಕುಗಳನ್ನು ಇಳಿಸಬೇಕಾಗಿತ್ತು *(ಅ.ಪೋ. ಕೃ 24:1-6)*. ಅವನು ಅಲ್ಲಿದ್ದ ಸಮಯದಲ್ಲಿ

ವಿಶ್ವಾಸಿಗಳು ಅವನು ಯೆರುಷಲೇಮಿಗೆ ಹೋಗುವುದು ಬೇಡವೆಂದು ಕೇಳಿಕೊಂಡರು. ವಿಶ್ವಾಸಿಗಳು ಪರಿಶುದ್ಧಾತ್ಮನಿಂದ ನಡೆಸಲ್ಪಟ್ಟು ಪೌಲನಿಗೆ ಯೆರುಷಲೇಮಿನ ಪ್ರಯಾಣದ ಕುರಿತಾಗಿ ಎಚ್ಚರಿಕೆಯನ್ನು ನೀಡಿದ್ದು ಪೌಲನಿಗೆ ಈ ಹಿಂದೆ ದೇವರು ನೀಡಿದ ದರ್ಶನಕ್ಕೆ ವಿರುದ್ಧವಾಗಿರಲಿಲ್ಲ. ಇಲ್ಲಿ ಉಪಯೋಗಿಸಿರುವ ಗ್ರೀಕ್ ಪದವನ್ನು ನಾವು "ತನ್ನ ಆತ್ಮದಲ್ಲಿ ಅಥವಾ ಮನಸ್ಸಿನಲ್ಲಿ ನಿರ್ಧರಿಸಿದ ಪ್ರಕಾರ" ಎಂಬುದಾಗಿ ಭಾಷಾಂತರ ಮಾಡಬಹುದು. ಇಲ್ಲಿ ವಿಷಯವೇನೆಂದರೆ ಪರಿಶುದ್ಧಾತ್ಮನು ತ್ರೋವದ ವಿಶ್ವಾಸಿಗಳಿಗೆ ಯೆರುಷಲೇಮಿನಲ್ಲಿ ಪೌಲನು ಎದುರಿಸಬಹುದಾದ ಅಪಾಯದ ಕುರಿತಾಗಿ ಪ್ರೇರಣೆಯನ್ನು ನೀಡಿರಬಹುದು. ಮತ್ತು ಮಾನವೀಯ ದೃಷ್ಟಿಕೋನದಲ್ಲಿ ಪೌಲನು ಅಲ್ಲಿಗೆ ಹೋಗುವುದು ಸೂಕ್ತವಲ್ಲ ಎಂದು ಹೇಳಿರಬಹುದು. ಯೆರುಷಲೇಮಿನಲ್ಲಿ ಏನು ನಡೆಯುತ್ತದೆ ಎಂಬುದರ ಕುರಿತಾಗಿ ಪೌಲನಿಗೆ ಸರಿಯಾದ ಮಾಹಿತಿಯಿರಲಿಲ್ಲ *(ಅ.ಪೋ.ಕೃ 20:22,23)*, ದೈವಿಕ ನಡೆಸುವಿಕೆಯು ಎಲ್ಲವನ್ನೂ ಕೂಡ ಸ್ಪಷ್ಟವಾಗಿ ತಿಳಿಸುವುದಿಲ್ಲ, ಇದಕ್ಕೆ ಪೌಲನಂತಹವರೂ ಕೂಡ ವಿನಾಯತಿಯನ್ನು ಹೊಂದುವುದಿಲ್ಲ.

**ಅ.ಪೋ.ಕೃ 21:10-14 ನ್ನು ಓದಿರಿ. ಪೌಲನ ಯೆರುಷಲೇಮಿನ ಪ್ರಯಾಣದ ಕುರಿತಾಗಿ ಕೈಸರೈದಲ್ಲಿ ಏನು ನಡೆಯಿತು?**

__________________________________________________________

__________________________________________________________

ಅ.ಪೋ ಕೃ 11:27-30 ರಲ್ಲಿ ಯೆರುಷಲೇಮಿನ ಬರಗಾಲದ ಹಿನ್ನಲೆಯಲ್ಲಿ ಈಗಾಗಲೇ ತಿಳಿಸಿರುವ ಪ್ರಕಾರ ಆಗಬನು ಒಬ್ಬ ಪ್ರವಾದಿಯಾಗಿದ್ದನು. ಇದು ಹಳೆಯ ಒಡಂಬಡಿಕೆಯ ಪ್ರವಾದನೆಗಳಿಗೆ ಹೋಲಿಕೆಯಾಗಿತ್ತು *(ಯೆಶಾಯ 20:1-6, ಯೆರೆಮಿಯ 13:1-10 ನ್ನು ಹೋಲಿಸಿರಿ)*, ಅವನ ಸಂದೇಶವು ನಾಟಕದ ರೂಪಕದಲ್ಲಿತ್ತು; ಅದು ಪೌಲನಿಗೆ ಯೆರುಷಲೇಮಿನಲ್ಲಿ ಏನು ನಡೆಯುತ್ತದೆ ಎಂಬುದನ್ನು ಸಾದೃಶ್ಯವಾಗಿ ತೋರಿಸುವುದಾಗಿತ್ತು ಮತ್ತು ಪೌಲನನ್ನು ಅವನ ಶತ್ರುಗಳು ಹೇಗೆ ಅನ್ಯರ (ರೋಮನ್ನರ) ಕೈಗೆ ಒಪ್ಪಿಸುವರು ಎಂದು ತೋರಿಸುವುದಾಗಿತ್ತು.
ಪೌಲನ ಜೊತೆಯಲ್ಲಿದ್ದವರು ಆಗಬನ ಸಂದೇಶವನ್ನು ಎಚ್ಚರಿಕೆಯಾಗಿ ತೆಗೆದುಕೊಂಡರು, ಅದನ್ನು ಪ್ರವಾದನೆಯಾಗಿ ತೆಗೆದುಕೊಳ್ಳಲಿಲ್ಲ ಮತ್ತು ಅಪೋಸ್ತಲನು ಯಾವುದೇ ರೀತಿಯಲ್ಲೂ ಕೂಡ ಯೆರುಷಲೇಮಿಗೆ ಹೋಗುವುದನ್ನು ತಪ್ಪಿಸಲು ಪ್ರಯತ್ನ ಮಾಡಿದರು. ಅವರ ಪ್ರತಿಕ್ರಿಯೆಗೆ ಬಹಳವಾಗಿ ಕನಿಕರಗೊಂಡರೂ ಕೂಡ ಪೌಲನು ತನ್ನ ಕಾರ್ಯವನ್ನು ಸಂಪೂರ್ಣಗೊಳಿಸುವ ಸಂಕಲ್ಪವನ್ನು ಮಾಡಿದ್ದನು, ಅದಕ್ಕಾಗಿ ತನ್ನ ಪ್ರಾಣವನ್ನು ಪಣಕ್ಕಿಡಲು ಸಿದ್ದನಾಗಿದ್ದನು. ಅವನಿಗೆ ಸುವಾರ್ತೆಯ ಬದ್ದತೆ ಮತ್ತು ಸಭೆಯ ಐಕ್ಯತೆಯು ತನ್ನ ಸ್ವಂತ ಸುರಕ್ಷತೆ ಮತ್ತು ಪ್ರಾಣಕ್ಕಿಂತ ಬಹಳ ಮುಖ್ಯವಾಗಿತ್ತು.

"ಈ ಹಿಂದೆ ಎಂದೂ ಕೂಡ ಅಪೋಸ್ತಲನು ಯೆರುಷಲೇಮಿಗೆ ಇಷ್ಟು ದುಃಖತಪ್ತನಾಗಿ ಬಂದಿರಲಿಲ್ಲ. ಅಲ್ಲಿ ಅವನಿಗೆ ಕೆಲವು ಸ್ನೇಹಿತರು ಮತ್ತು ಅನೇಕ ಶತ್ರುಗಳು ಸಿಗುವರು ಎಂದು ಗೊತ್ತಿತ್ತು. ದೇವರ ಕುಮಾರನನ್ನು

ತಿರಸ್ಕರಿಸಿ ಆತನನ್ನು ಮರಣಕ್ಕೆ ಒಪ್ಪಿಸಿದ ಶಿಲುಬೆಯಲ್ಲಿ ತೂಗಾಡುವಂತೆ ಮಾಡಿ ದೇವರ ಶಾಪಕ್ಕೆ ಗುರಿಯಾಗಿದ್ದ ನಗರಕ್ಕೆ ಹತ್ತಿರವಾಗಿದ್ದನು." ಎಲೆನ್ ಜಿ. ವೈಟ್, *ದಿ ಅಕ್ಟ್ಸ್ ಆಫ್ ಅಪೋಸ್ಟ್ಲ ಸ್*, ಪುಟ 397, 398.

**ತಪ್ಪಾಭಿಪ್ರಾಯ, ದೋಷಾರೋಪಣೆ, ದುಷ್ಕೃತ್ಯ ಮತ್ತು ಹೆಚ್ಚಿನ ಸಮಯದಲ್ಲಿ ದೂಷಣೆ ಮಾಡಲ್ಪಟ್ಟರು ಕೂಡ ಪೌಲನು ತನ್ನ ನಂಬಿಕೆಯಲ್ಲಿ ಮುಂದೆ ಹೋದನು. ನಮ್ಮನ್ನು ನಿರಾಶೆಗೊಳಿಸುವ ಸಮಯಗಳಲ್ಲಿ ನಾವು ಪೌಲನಿಂದ ಯಾವ ವಿಧವಾದ ಪಾಠವನ್ನು ಕಲಿಯಬಹುದು?**

**ಶುಕ್ರವಾರ** ಸೆಪ್ಟೆಂಬರ್ 7

**ಹೆಚ್ಚಿನ ಚಿಂತನೆ:** "ಸುವಾರ್ತೆಯ ಯಶಸ್ಸು ಎಲ್ಲಾ ದಿಕ್ಕುಗಳಿಂದ ಬರುತ್ತಿತ್ತು. ಎಲ್ಲಾ ಕಡೆಗಳಿಂದ ಕೂಡ ಅನ್ಯರು ದೇವರ ವಾಕ್ಯವನ್ನು ಸ್ವೀಕಾರ ಮಾಡಿಕೊಂಡು ಹೊಸ ಸಿದ್ಧಾಂತಗಳನ್ನು ಅಂಗಿಕರಿಸಿಕೊಂಡು ಯೆಹೂದ್ಯರ ಕಟ್ಟಳೆ ಮತ್ತು ಆಚಾರಗಳನ್ನು ಮುರಿದುಕೊಂಡು ಎಲ್ಲರೂ ಕೂಡ ಅಬ್ರಹಾಮನ ಮಕ್ಕಳಾಗಿ ಯೆಹೂದ್ಯರ ಜೊತೆಯಲ್ಲಿ ಬೆರೆತುಕೊಳ್ಳುತ್ತಿದ್ದರು.... ಅವನ (ಪೌಲನ) ದೃಢವಾದ ಮಾತುಗಳಲ್ಲಿ "ಇದರಲ್ಲಿ ಗ್ರೀಕನು ಯೆಹೂದ್ಯನು ಎಂಬ ಭೇದವಿಲ್ಲ; ಸುನ್ನತಿ ಮಾಡಿಸಿ ಕೊಂಡವರು ಸುನ್ನತಿ ಮಾಡಿಸಿಕೊಳ್ಳದವರು ಎಂಬ ಭೇದವಿಲ್ಲ," *(ಕೊಲೋಸ್ಸೆ 3:11),* ಎಂಬ ಈ ಮಾತುಗಳನ್ನು ಅವನ ಶತ್ರುಗಳು ದೇವದೂಷಣೆಯಾಗಿ ಭಾವಿಸಿದರು ಮತ್ತು ಅವನ ಸ್ವರವನ್ನು ಅಡಗಿಸಬೇಕು ಎಂದು ತೀರ್ಮಾನಿಸಿದರು" ಎಲೆನ್ ಜಿ. ವೈಟ್, *ದಿ ಅಕ್ಟ್ಸ್ ಆಫ್ ಅಪೋಸ್ಟ್ಲ ಸ್*, ಪುಟ 390.

"ವಿಶ್ವಾಸದಲ್ಲಿ ತನ್ನ ಸ್ವಂತ ಅಥವಾ ಹತ್ತಿರದ ಜನರ ಕರುಣೆ ಮತ್ತು ಸಹಾಯವನ್ನು ಪೌಲನು ಎದುರುನೋಡಲಿಲ್ಲ. ಮಾನಸಾಂತರ ಹೊಂದದ ಯೆಹೂದ್ಯರು ಅವನನ್ನು ಬಹಳ ಹತ್ತಿರದಿಂದ ಹಿಂಬಾಲಿಸಿದರು, ಇದರಿಂದ ಯೆರುಷಲೇಮಿನಲ್ಲಿ ಅವನ ವಿರುದ್ಧವಾಗಿ ಬೇಕಾಗಿದ್ದ ಸಾಕ್ಷಿಯನ್ನು ಸಂಪಾದಿಸಿದರು. ಈ ಸಾಕ್ಷಿಯನ್ನು ವ್ಯಯಕ್ತಿಕವಾಗಿ ಮತ್ತು ಪತ್ರಗಳ ಮೂಲಕ ಅವನ ಮತ್ತು ಅವನ ಕಾರ್ಯಗಳ ವಿವರಣೆಯನ್ನು ಸಂಗ್ರಹಿಸಿದರು: ಮತ್ತು ಕೆಲವು ಅಪೋಸ್ತಲರು ಮತ್ತು ಸಭೆಯ ಹಿರಿಯರು ಕೂಡ ಇದನ್ನು ಸತ್ಯವೆಂದು ನಂಬಿದರು, ಇದನ್ನು ಅವರು ವಿರೋಧಿಸಲಿಲ್ಲ ಮತ್ತು ಸರಿಪಡಿಸಲು ಪ್ರಯತ್ನಗಳನ್ನು ಕೂಡ ಮಾಡಲಿಲ್ಲ." ಪುಟ 398.

**ಚರ್ಚಿಸಬೇಕಾದ ಪ್ರಶ್ನೆಗಳು**

1. **ಪೌಲನು ಎಫೆಸದಲ್ಲಿ ಭೇಟಿಯಾದ 12 ಜನ ಶಿಷ್ಯರು ಯೋಹಾನ ಶಿಷ್ಯರಾಗಿದ್ದು ಈಗಾಗಲೇ ಅವರಿಗೆ ಯೇಸುವಿನ ಕುರಿತಾಗಿ ತಿಳಿದಿತ್ತು (ಅ.ಪೋ.ಕೃ 19:1-7), ಅಡ್ವೆಂಟಿಸ್ಟ್ ಸಭೆಗೆ ಸೇರಲು ಬಯಸುವ ಇತರೆ ಸಭೆಯಲ್ಲಿ ಮುಳುಗಿಸುವ ದೀಕ್ಷಾಸ್ನಾನ ತೆಗೆದುಕೊಂಡಿರುವ ವಿಶ್ವಾಸಿಗಳಿಗೆ ಮರು ದೀಕ್ಷಾಸ್ನಾನದ ಅವಶ್ಯಕತೆಯನ್ನು ಈ ಸನ್ನಿವೇಶದ ಮೂಲಕ ನಾವು ಹೇಗೆ ತಿಳಿಸಬಹುದು? ಅಪೋಲ್ಲೋ ಮರು ದೀಕ್ಷಾಸ್ನಾನವನ್ನು ಪಡೆಯಲಿಲ್ಲ ಇದರ ಹಿಂದೆ ಯಾವುದಾದರೂ ಮಹತ್ವವಾದ ಅಂಶವಿದೆಯೋ?**

2. ಪೌಲನ ಪರಿಸ್ಥಿತಿಯನ್ನು ಕುರಿತಾಗಿ ಆಲೋಚಿಸಿರಿ. ಯೇಸುವನ್ನು ನಂಬದಿರುವ ತನ್ನ ಸ್ವಂತ ಜನರಿಂದ ಅವನು ತಿರಸ್ಕಾರವನ್ನು ಹೊಂದಿದ್ದಾನೆ. ಯೇಸುವನ್ನು ನಂಬುವ ಯೆಹೂದ್ಯರೂ ಕೂಡ ಇದರಲ್ಲಿ ಸೇರಿದ್ದಾರೆ, ಅವರಲ್ಲಿ ಅನೇಕರು ಪೌಲನನ್ನು ದ್ರೋಹಿಯೆಂದು ನೋಡುತ್ತಾರೆ, ಯಾಕೆಂದರೆ ಅವನು ಕಟ್ಟಳೆಗಳನ್ನು ಮಿರುತ್ತಿದ್ದಾನೆ. ಅನೇಕ ವಿಗ್ರಹಾರಾಧಕರು ಅವನು ಸಾರುವ ಸುವಾರ್ತೆಯನ್ನು ದ್ವೇಷಿಸುತ್ತಾರೆ. ಇದರ ಹೊರೆತಾಗಿಯೂ ಕೂಡ ಪೌಲನು ಯಾಕೆ ಮುಂದೆ ಸಾಗುತ್ತಿದ್ದಾನೆ ಈ ಎಲ್ಲಾ ವಿರೋಧದ ನಡುವೆಯೂ ಯಾಕೆ ಮುನ್ನಡೆಯಬೇಕು?ನಾವು ಪೌಲನ ಸ್ಥಾನದಲ್ಲಿ ಇಲ್ಲದಿದ್ದರೂ ಕೂಡ ಅವನ ಕಥೆಯಿಂದ ನಾವು ಏನು ಕಲಿಯಬಹುದು?

3. ಜನರು ಏಳನೇಯ ದಿನದ ಸಬ್ಬತ್ತನ್ನು ವಾರದ ಮೊದಲನೇಯ ದಿನಕ್ಕೆ ಬದಲಾಯಿಸಲಾಗಿದೆ ಮತ್ತು ಅದನ್ನು ನಾವು ಸಬ್ಬತ್ತನ್ನು ಆಚರಿಸಬೇಕಾಗಿಲ್ಲ ಎಂಬ ವಾದವನ್ನು ಸಮರ್ಥಿಸಿಕೊಳ್ಳುವ ಅನೇಕ ವಿಧಾನಗಳ ಕುರಿತಾಗಿ ಆಲೋಚಿಸಿರಿ. ಇಂತಹ ವಾದಗಳನ್ನು ನೀವು ಹೇಗೆ ಎದುರಿಸುವಿರಿ ಮತ್ತು ಸಬ್ಬತ್ತಿನ ದಿನಕ್ಕೆ ನಾವು ತೋರಿಸುವ ವಿಧೆಯತೆಯು ಮಿಕ್ಕ ಎಲ್ಲಾ ಒಂಭತ್ತು ಆಜ್ಞೆಗಳಿಗೆ ತೋರಿಸುವ ವಿಧೆಯತೆಗೆ ಯಾವುದೇ ವಿಧದಲ್ಲೂ ಅಡ್ಡಿಬರುವುದಿಲ್ಲ ಎಂದು ಹೇಗೆ ತೋರಿಸುವಿರಿ ಮತ್ತು ನಾವು ನಂಬಿಕೆಯ ಮೂಲಕ ವಿಶ್ವಾಸಿಸುತ್ತೇವೆ ಹಾಗೂ ನಮ್ಮ ಅಂತಿಮ ನಿರೀಕ್ಷೆಯು ಕ್ರಿಸ್ತನಲ್ಲಿದೆ ಎಂದು ಹೇಗೆ ಅವರಿಗೆ ತೋರಿಸುವಿರಿ?